ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಬಿಟಿಇ/01/ಇಸಿಎಸ್2/2013

ನಿರ್ದೇಶಕರವರ ಕಛೇರಿ
ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು-1
ದಿನಾಂಕ: 13-06-2013

ಸುತ್ತೋಲೆ

ವಿಷಯ: ಮರುಮೌಲ್ಯಮಾಪನ ಕೇಂದ್ರದಲ್ಲಿ ಮರುಮೌಲ್ಯಮಾಪಕರು ನಿರ್ವಹಿಸಬೇಕಾದ ಕರ್ತವ್ಯಗಳ ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತಾಂತ್ರಿಕ ಪರೀಕ್ಷಾ ಮಂಡಳಿಯ ಮರುಮೌಲ್ಯಮಾಪನ ಕೇಂದ್ರದಲ್ಲಿ ಮರುಮೌಲ್ಯಮಾಪಕರು ತಮ್ಮ ಕರ್ತವ್ಯವನ್ನು ನಿರ್ವಹಿಸುವಾಗ ಈ ಕೆಳಕಂಡ ಅಂಶಗಳನ್ನು ಗಮನದಲ್ಲಿಡುವಂತೆ ಸೂಚಿಸಲಾಗಿದೆ.

1. ಮರುಮೌಲ್ಯಮಾಪಕರು ಮೌಲ್ಯಮಾಪನ ಕೇಂದ್ರದಲ್ಲಿ ಬೆಳಿಗ್ಗೆ 9.30 ಗಂಟೆಗೆ ಹಾಜರಾಗತಕ್ಕದ್ದು ಮತ್ತು ತಮ್ಮ ವಿಭಾಗದ ಹಾಜರಾತಿ ಪುಸ್ತಕದಲ್ಲಿ ಕಡ್ಡಾಯವಾಗಿ ಸಹಿ ಮಾಡಿ ಸಂಜೆ 5.00 ಗಂಟೆವರೆಗೆ ಕೇಂದ್ರದಲ್ಲಿ ಹಾಜರಿದ್ದು ತಮ್ಮ ಇನ್ನಿಬ್ಬರು ಸಮಿತಿಯ ಸದಸ್ಯರೊಡನೆ ಸಕ್ರಿಯವಾಗಿ ಕೆಲಸ ನಿರ್ವಹಿಸತಕ್ಕದ್ದು.

2. ಸಂಬಂಧಿಸಿದ ವಿಭಾಗದ ಛೇರ್ಮನ್/ಮೇಲ್ವಿಚಾರಕರಿಂದ ಮರುಮೌಲ್ಯಮಾಪನ ಮಾಡಬೇಕಾದ ಉತ್ತರಪತ್ರಿಕಗಳ ಪ್ಯಾಕೆಟ್‌ಗಳನ್ನು ಪಡೆದು ಪರಿಶೀಲಿಸಿ ನಂತರ **Issue Register** ನಲ್ಲಿ ಸಹಿ ಮಾಡತಕ್ಕದ್ದು. ಪ್ಯಾಕೆಟ್‌ನಲ್ಲಿ ಯಾವುದೇ ನ್ಯೂನತೆ, ದೋಷ ಅಥವಾ ಮಾರ್ಕ್ಸ್ ಲಿಸ್ಟ್‌ಗೂ ಉತ್ತರ ಪತ್ರಿಕೆಗಳಿಗೂ ತಾಳೆ ಆಗದ ಪಕ್ಷದಲ್ಲಿ ಈ ವಿಷಯವನ್ನು ಕೂಡಲೇ ಸಂಬಂಧಿಸಿದ ಶಿಬಿರಾಧಿಕಾರಿಯವರ ಗಮನಕ್ಕೆ ತರುವುದು.

3. ಮರುಮೌಲ್ಯಮಾಪಕರು (3 ಜನರ ಸಮಿತಿ) ಪ್ರತಿ ದಿನ ಕನಿಷ್ಠ 30 ಉತ್ತರ ಪತ್ರಿಕೆಗಳನ್ನು ಸಂಪೂರ್ಣವಾಗಿ ಮೌಲ್ಯಮಾಪನ ಮಾಡಬೇಕು. ಭರ್ತಿ ಮಾಡಿದ ಮರುಮೌಲ್ಯಮಾಪನದ ನಮೂನೆಗಳನ್ನು ಆಯಾ ಉತ್ತರಪತ್ರಿಕೆಗಳೊಳಗೇ ಇಟ್ಟು ಪೂರ್ಣಗೊಂಡ ಪ್ಯಾಕೆಟ್‌ಗಳನ್ನು ಹಿಂತಿರುಗಿಸುವುದು. ಸಹಿ ಮಾಡಲ್ಪಟ್ಟ ಮಾರ್ಕ್ಸ್‌ಲಿಸ್ಟ್‌ಗಳನ್ನು ಬೇರೆಯಾಗಿ ಹಿಂತಿರುಗಿಸುವುದು. ಅಪೂರ್ಣವಾದ ಪ್ಯಾಕೆಟ್‌ಗಳನ್ನು ಇಡದಂತೆ ಕಟ್ಟುನಿಟ್ಟಾಗಿ ಸೂಚಿಸಲಾಗಿದೆ.

4. ಮರುಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಮೂರು ಜನ ಸದಸ್ಯರು ಸಕ್ರಿಯವಾಗಿ ಜೊತೆಯಲ್ಲಿ ಕುಳಿತು ಉತ್ತರಪತ್ರಿಕೆಯಲ್ಲಿನ ಉತ್ತರಗಳನ್ನು ಓದಿ ಮೌಲ್ಯಮಾಪನ ಸಮಯದಲ್ಲಿ ಮುಖ್ಯ ಪರೀಕ್ಷಕರಿಂದ ರಚಿತವಾದ ಸ್ಕೀಂ ಆಫ್ ವ್ಯಾಲ್ಯುಯೇಷನ್ ಮತ್ತು ಮಾದರಿ ಉತ್ತರಗಳ ಪ್ರಕಾರವೇ ಅಂಕಗಳನ್ನು ನಿರ್ಧರಿಸಿ ಮರುಮೌಲ್ಯಮಾಪನ ನಮೂನೆಯಲ್ಲಿ ಸ್ಪಷ್ಟವಾಗಿ ದಾಖಲಿಸಬೇಕು. ಮೌಲ್ಯಮಾಪನವಾಗಿರದ ಉತ್ತರಗಳನ್ನು ಮರುಮೌಲ್ಯಮಾಪನದ ವೇಳೆ ಗಣನೆಗೆ ತೆಗೆದುಕೊಂಡು ಸ್ಕೀಂ ಆಫ್ ವ್ಯಾಲ್ಯುಯೇಷನ್ ಪ್ರಕಾರ ಅಂಕಗಳನ್ನು ನೀಡುವುದು.

5. ಶೂನ್ಯ ಅಂಕಗಳನ್ನು ದಾಖಲಿಸುವಾಗ ಅಕ್ಷರಗಳಲ್ಲಿಯೇ ಅಂಕಗಳನ್ನು ನಮೂದಿಸಲು (ಉದಾ: **zero zero**) ಸೂಚಿಸಲಾಗಿದೆ.

6. ಮರುಮೌಲ್ಯಮಾಪನ ನಮೂನೆಗಳನ್ನು ಯಾವುದೇ ರೀತಿಯ ತಪ್ಪುಗಳು ಇಲ್ಲದಂತೆ ಸಂಪೂರ್ಣವಾಗಿ ಭರ್ತಿ ಮಾಡಿ ಖಾಲಿ ಇದ್ದ ಕಡೆ ಅಡ್ಡಗೆರೆ ಹಾಕುವುದು ಮತ್ತು ಮೂರು ಜನ ಮರುಮೌಲ್ಯಮಾಪಕರು ಸಹಮತದಿಂದ ಪೂರ್ಣಸಹಿ ಮಾಡಿ ತಮ್ಮತಮ್ಮ ಕೋಡ್ ( ಬಿಟಿಇ ಲಿಂಕ್ಸ್ **Staff Id**) ಬರೆಯಲು ಸೂಚಿಸಲಾಗಿದೆ.

7. ಮರುಮೌಲ್ಯಮಾಪನದ ನಂತರದ ಒಟ್ಟು ಅಂಕಗಳು ಮತ್ತು ಹಳೆಯ ಅಂಕಗಳ (ಹಿಂದಿನ ಮೌಲ್ಯಮಾಪನದ ಒಟ್ಟು ಅಂಕ ಮಾರ್ಕ್ಸ್‌ಲಿಸ್ಟ್ ನಲ್ಲಿ ಪ್ರಿಂಟ್ ಆಗಿರುತ್ತದೆ) ವ್ಯತ್ಯಾಸವನ್ನು +/- ಚಿಹ್ನೆಯೊಂದಿಗೆ ಸ್ಪಷ್ಟವಾಗಲಿ ನಮೂದಿಸುವುದು.

8. ಮರುಮೌಲ್ಯಮಾಪಕರು ಸದರಿ ನಮೂನೆಗಳಿಂದ ಮರುಮೌಲ್ಯಮಾಪನದ ಒಟ್ಟು ಅಂಕಗಳನ್ನು ಮಾರ್ಕ್ಸ್‌ಲಿಸ್ಟ್‌ಗೆ ವರ್ಗಾಯಿಸುವುದು ಹಾಗೂ ಮಾರ್ಕ್ಸ್ ಲಿಸ್ಟ್ ಕೊನೆಯಲ್ಲಿ ಸಮಿತಿಯ ಮೂರೂ ಜನರು ಪೂರ್ಣ ಸಹಿ ಮಾಡಿ ಹೆಸರು, ವಿಳಾಸ ಮತ್ತು ಬಿಟಿಇ ಲಿಂಕ್ಸ್ Staff Id ಬರೆಯಲು ಸೂಚಿಸಲಾಗಿದೆ.

9. ಮಾರ್ಕ್ಸ್‌ಲಿಸ್ಟ್‌ಗಳಲ್ಲಿ ಮತ್ತು ಮರುಮೌಲ್ಯಮಾಪನ ನಮೂನೆಗಳಲ್ಲಿ ಅಂಕಗಳನ್ನು ಸ್ಪುಟವಾಗಿ ಬರೆಯುವುದು; ಯಾವುದೇ ಕಾರಣಕ್ಕೂ ಅಂಕಗಳನ್ನು ತಿದ್ದಬಾರದಾಗಿ ಸೂಚಿಸಿದೆ.

10. ಕಾರ್ಯದರ್ಶಿ, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು ಇವರು ಕಾಲಕಾಲಕ್ಕೆ ನೀಡುವ ಸೂಚನೆಗಳನ್ನು ಪಾಲಿಸುವುದು.

ಈ ಮೇಲಿನ ಎಲ್ಲಾ ಅಂಶಗಳನ್ನು ಗಂಭೀರವಾಗಿ ಪರಿಗಣಿಸಿ ಲೋಪದೋಷಗಳಿಗೆ ಅವಕಾಶವಿಲ್ಲದಂತೆ ಸಮರ್ಪಕವಾಗಿ ಮರುಮೌಲ್ಯಮಾಪನ ಕಾರ್ಯ ಮಾಡುವಂತೆ ಸೂಚಿಸುತ್ತಾ, ಒಂದು ವೇಳೆ ಲೋಪದೋಷಗಳನ್ನು ಎಸಗಿದಲ್ಲಿ/ಸೂಚನೆಗಳನ್ನು ಪಾಲಿಸದಿದ್ದಲ್ಲಿ ಮರುಮೌಲ್ಯಮಾಪಕರ ವಿರುದ್ಧ ತಾಂತ್ರಿಕ ಪರೀಕ್ಷಾ ಮಂಡಳಿಯ ನಿಯಮ 28ರ ಅಡಿಯಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ಎಚ್ಚರಿಸಲಾಗಿದೆ.

13/6

ಕಾರ್ಯದರ್ಶಿ

13/6/15

ಇವರಿಗೆ,

1) ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳು – ಸಂಸ್ಥೆಗಳಲ್ಲಿ ಉಪನ್ಯಾಸಕರುಗಳಿಗೆ ಸುತ್ತೋಲಿಸಲು
2) ಮರುಮೌಲ್ಯಮಾಪಕರು – ಮಾಹಿತಿಗಾಗಿ – ಶಿಬಿರದ ಮೇಲ್ವಿಚಾರಕರಿಂದ ಪರಿಚಲನೆ ಮೂಲಕ

ಪ್ರತಿ: 1) ಇ – ಗವರ್ನೆನ್ಸ್ ವಿಭಾಗ
2) ಮರುಮೌಲ್ಯಮಾಪನ ಕೇಂದ್ರದಲ್ಲಿ ಪ್ರಕಟಣೆಗಾಗಿ
3) ಕಡತಕ್ಕೆ